## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದವರ ವತಿಯಿಂದ 2019-20ನೇ ಸಾಲಿಗೆ ಸೀಮಿತಗೊಳಿಸಿ 2ನೇ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ನಡೆಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ :-**

1. ಸರ್ಕಾರದ ಆದೇಶ ಸಂಖ್ಯೆ ಇಡಿ 302 ಎಸ್‌ಎಲ್‌ಬಿ 2017, ದಿನಾಂಕ:15/09/2018.
2. ಸರ್ಕಾರದ ಆದೇಶ ಸಂಖ್ಯೆ ಇಡಿ 302 ಎಸ್‌ಎಲ್‌ಬಿ 2017, ದಿನಾಂಕ:28/11/2019.
3. ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, ಇವರ ಏಕ ಕಡತ ಸಂಖ್ಯೆ : ಎ8/ಎಸ್‌ಎಸ್‌ಎಲ್‌ಸಿ/ಪೂ.ಸಿ.ಪ/37/2019-20 ದಿನಾಂಕ:21/12/2019.
4. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದರವರ ಮನವಿ ಪತ್ರದ ದಿನಾಂಕ:04.12.2019.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮಸಂಖ್ಯೆ(1)ರ ಸರ್ಕಾರಿ ಆದೇಶದಲ್ಲಿ 2018-19ನೇ ಸಾಲಿನಿಂದ ಎಸ್.ಎಸ್.ಎಲ್.ಸಿ ಪೂರ್ವ ಸಿದ್ದತಾ ಪರೀಕ್ಷೆ ಹಾಗೂ ಜಿಲ್ಲಾ ಮಟ್ಟದ ಅರ್ಧವಾರ್ಷಿಕ ಪರೀಕ್ಷೆಗಳನ್ನು ಕರ್ನಾಟಕ ಮುಖ್ಯಶಿಕ್ಷಕರ ಸಂಘದ ವತಿಯಿಂದ ನಡೆಸಲು ಅನುಮತಿಸಿದ್ದು, ಈ ರೀತಿ ಪರೀಕ್ಷೆಗಳನ್ನು ನಡೆಸುವುದಕ್ಕೂ ಮುನ್ನ, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿಯ ನೀಲಿ ನಕ್ಷೆಯ ರೂಪರೇಷಗಳನ್ನು ಹಾಗೂ ಹೊಸ ಪಠ್ಯ ವಿಧಾನ ಅನುಸರಿಸಿ, ಉಪನಿರ್ದೇಶಕರು, ಜಿಲ್ಲಾ ತರಬೇತಿ ಮತ್ತು ಶಿಕ್ಷಣ ಸಂಸ್ಥೆ (ಡಯಟ್) ಹಾಗೂ ಕರ್ನಾಟಕ ರಾಜ್ಯ ಮುಖ್ಯಶಿಕ್ಷಕರ ಸಂಘವು ಒಟ್ಟಾಗಿ ಚರ್ಚಿಸಿ, ಗೊಂದಲಗಳಿಗೆ ಆಸ್ಪದ ನೀಡದಂತೆ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ ಪರೀಕ್ಷೆಗಳನ್ನು ನಡೆಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ(2) ರ ಸರ್ಕಾರಿ ಆದೇಶದಲ್ಲಿ ಉಲ್ಲೇಖಿತ(1)ರ ದಿನಾಂಕ:15/09/2018ರ ಆದೇಶವನ್ನು ಹಿಂಪಡೆದು ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಯಲ್ಲಿ ಶುಲ್ಕ ವಿನಾಯಿತಿ ನೀಡಲಾಗುವ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಮತ್ತು ಸರ್ಕಾರಿ ಶಾಲೆಯ ಹೆಣ್ಣುಮಕ್ಕಳ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಜಿಲ್ಲಾ ವಲಯಕ್ಕೆ ವರ್ಗಾವಣೆಯಾಗುವ ಕಾರ್ಯಕ್ರಮಗಳಡಿಯಲ್ಲಿ ಲಿಂಕ್‌ಡಾಕ್ಯೂಮೆಂಟ್ ಮೂಲಕ ಜಿಲ್ಲಾ ಪಂಚಾಯತ್‌ನಿಂದ ಹಾಗೂ ಪ್ರವರ್ಗವಾರು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮರುಪಾವತಿ ಮೊತ್ತವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತ ಇಲಾಖೆರವರಿಂದ ಪಡೆಯಲಾಗುತ್ತಿದ್ದು 2019-20ನೇ ಸಾಲಿನಲ್ಲಿ ನಡೆಯುವ ಎಸ್.ಎಸ್.ಎಲ್.ಸಿ ಪೂರ್ವಸಿದ್ದತಾ ಪರೀಕ್ಷೆಗೆ ಸಮಯದ ಕೊರತೆ ಇರುವ ಕಾರಣ ಪ್ರಸ್ತುತ ಸಾಲಿಗೆ ಸಂಬಂಧಿಸಿದ ಇಲಾಖೆಗಳಿಂದ ಮರುಭರಣ ಪಡೆಯಲಾಗದ ಪ್ರಯುಕ್ತ ಈ ಮೊತ್ತವನ್ನು 2019-20ನೇ ಸಾಲಿನಲ್ಲಿ ಮಂಡಳಿಯ ಕೆ.ಎಸ್.ಕ್ಯೂ.ಎ.ಎ.ಸಿ.ಗೆ ಮಂಜೂರಾಗಿರುವ ಅನುದಾನದಿಂದ ಭರಿಸಲು ಹಾಗೂ ಈ ಸಾಲಿನಿಂದ ಸಾಮಾನ್ಯ ಪ್ರತಿ ವಿದ್ಯಾರ್ಥಿಗಳಿಂದ ರೂ.25/- (ಇಪ್ಪತ್ತೈದು ರೂಪಾಯಿಗಳು ಮಾತ್ರ) ಪೂರ್ವಸಿದ್ದತಾ ಪರೀಕ್ಷಾ ಶುಲ್ಕವನ್ನು ಪಡೆಯಲು ಹಾಗೂ 2019-20ನೇ ಸಾಲಿನಿಂದ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ದತಾ ಪರೀಕ್ಷೆಗೆ ಪ್ರಶ್ನೆಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದಲೇ ರಾಜ್ಯ ಮಟ್ಟದಲ್ಲಿ ಸಿದ್ದಪಡಿಸಿ ಸರಬರಾಜು ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮಸಂಖ್ಯೆ(3)ರ ಏಕ ಕಡತದ ಮೂಲಕ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಮಾತ್ರ ನಡೆಸಲು ಈಗಾಗಲೇ ಸರ್ಕಾರದಿಂದ ಆದೇಶವಾಗಿದ್ದು, ಸರ್ಕಾರದ ಆದೇಶಕ್ಕಿಂತ ಮುಂಚಿತವಾಗಿ ಮುಖ್ಯೋಪಾಧ್ಯಾಯರ ಸಂಘದವರು

Scanned by CamScanner

ಶಾಲೆಗಳಿಂದ ಇಂಡೆಂಟ್ ಸ್ವೀಕರಿಸಿರುವ ಹಿನ್ನೆಲೆಯಲ್ಲಿ ಸಂಘದ ವತಿಯಿಂದ ಸ್ವೀಕರಿಸಲಾದ ಶಾಲೆಗಳಲ್ಲಿ 2ನೇ ಪೂರ್ವ ಸಿದ್ಧತಾ ಪರೀಕ್ಷೆಯನ್ನು ಫೆಬ್ರವರಿ 2020ರ ಮಾಹೆಯಲ್ಲಿ ಹೆಚ್ಚುವರಿಯಾಗಿ ಪರೀಕ್ಷೆಯನ್ನು ನಡೆಸುವ ಕುರಿತು ಸಲ್ಲಿಸಿರುವ ಪ್ರಸ್ತಾವನೆಯನ್ನು ಹಾಗೂ

ಕ್ರಮಸಂಖ್ಯೆ(4)ರ ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದವರ ಮನವಿಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 302 ಎಸ್‌ಎಲ್‌ಬಿ 2017,**
**ಬೆಂಗಳೂರು, ದಿನಾಂಕ: 10ನೇ ಜನವರಿ 2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 302 ಎಸ್‌ಎಲ್‌ಬಿ 2017 ದಿನಾಂಕ:28.11.2019ರಲ್ಲಿ 2019-20ನೇ ಸಾಲಿನಿಂದ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಪ್ರಶ್ನೆಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದಲೇ ರಾಜ್ಯ ಮಟ್ಟದಲ್ಲಿ ಸಿದ್ಧಪಡಿಸಿ ಸರಬರಾಜು ಮಾಡಲು ಅನುಮತಿಸಿರುವುದನ್ನು ಪುನರುಚ್ಚರಿಸಿದೆ. ಮುಂದುವರೆದು, 2019-20ನೇ ಸಾಲಿನಲ್ಲಿ ಮಾತ್ರ ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಯರ ಸಂಘದ ವತಿಯಿಂದ ಎರಡನೇ ಪೂರ್ವಸಿದ್ಧತಾ ಪರೀಕ್ಷೆಯನ್ನು ಈ ವರ್ಷಕ್ಕೆ ಸೀಮಿತಗೊಳಿಸಿ ನಡೆಸಲು ಅನುಮತಿ ನೀಡಿದೆ ಹಾಗೂ ಮುಂದಿನ ವರ್ಷ ಯಾವುದೇ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲವೆಂದು. ಸಹ ತಿಳಿಸಿದೆ. ಅಲ್ಲದೇ ಪ್ರಸ್ತಾಪಿತ ಈ ಶಾಲೆಗಳಿಗೆ ಸಂಬಂಧಿಸಿದಂತೆ, ಸಂಘದ ವತಿಯಿಂದ ನಡೆಸುವ ಪೂರ್ವಸಿದ್ಧತಾ ಪರೀಕ್ಷೆಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಅನುದಾನ ವೆಚ್ಚ ಮಾಡತಕ್ಕದ್ದಲ್ಲವೆಂದು ಈ ಮೂಲಕ ಸೂಚಿಸಿದೆ..

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V.T 10/1

(ವಿ. ಟಿ. ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

**ಇವರಿಗೆ :-**

1. ಮಹಾಲೇಖಪಾಲರು, ಕರ್ನಾಟಕ (ಎ ಮತ್ತು ಇ), ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ನೃಪತುಂಗರಸ್ತೆ, ಬೆಂಗಳೂರು.
4. ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
5. ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗರಸ್ತೆ, ಬೆಂಗಳೂರು.
6. ನಿರ್ದೇಶಕರು, ಡಿಎಸ್‌ಇಆರ್‌ಟಿ, ಹೊಸಕೆರೆಹಳ್ಳಿ, ಬೆಂಗಳೂರು.
7. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರ ಮುಖಾಂತರ)
8. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned by CamScanner

| **B.S.D.H.M's. Association (R).**<br>Kalasipalyam, Bangalore. | - : Contact Numbers : -<br>M.A. KHAN 9845224228 \| M. MAHESH 9845175236 | **S** |
|---|---|---|

**INDENT FOR 2ND STATE LEVEL PREPARATORY EXAMINATION QUESTION PAPERS FOR MARCH - 2020**

**INDENT FORM**

Sl. No. of Distribution Centre Selected ______

TYPE OF SCHOOL

| GOVT. | AIDED | UNAIDED |
|---|---|---|

RANGE

| S1 | S2 | S3 | S4 | ANK |
|---|---|---|---|---|

S.S.L.C. SCHOOL CODE NO.

**AS -**

1. Name of the Principal/Headmaster ______
2. Name of the Institution ______
   with Postal Address ______
   ______
3. Phone No ______ Mobile : ______

| | | | | | | | |
|---|---|---|---|---|---|---|---|
| **FIRST** LANGUAGE | Kannada | English | Tamil | Hindi | Sanskrit | Urdu | TOTAL |
| | | | | | | | |
| **SECOND** LANGUAGE | ENGLISH | | | KANNADA | | | TOTAL |
| | | | | | | | |
| **THIRD** LANGUAGE | HINDI | | KANNADA | | SANSKRIT | | TOTAL |
| | | | | | | | |
| **MEDIUM** CORE SUBJECTS ( MATHS, SCIENCE, SOCIAL SCIENCE) | KAN. MEDIUM (KM) | | | ENG. MEDIUM (EM) | | | TOTAL |
| | | | | | | | |

Total Sets Required ______ x 40.00 = ______

D.D. No. ______ Date ______

Name of the Bank & Address ______

**LAST DATE FOR SUBMISSION : 05-02-2020**

Signature of
H.M. / Principal with Seal

NOTE : (1) Separate Question Paper and Separate answer book-let will be supplied.
(2) DD's Should be drawn in favour of B.S.D. HMS' ASSOCIATION, BANGALORE.
(3) Indent to be submitted with D.D. at : Bangalore Higher Secondary School (BHS), R.V. Road, B'lore.
(4) You can also Download from our Website : www.optra-india.com/bsouth

# KARNATAKA STATE SECONDARY SCHOOL HEADMASTER'S ASSOCIATION

Head Office : "Vidya Bhavan", # 4/2, 31, 'A' Street, New Guddadahalli,
Kuvempu Nagar, G.E.F. Post, Mysore Road, B'lore - 26.

## S.S.L.C. PREPARATORY EXAMINATION TIME TABLE - MARCH 2020

| DATE | DAY | SUBJECT | TIMINGS |
|---|---|---|---|
| 02.03.2020 | Monday | I - LANGUAGE | 9.30 a.m to 12.45 p.m. |
| 03.03.2020 | Tuesday | SCIENCE | 9.30 a.m to 12.45 p.m. |
| 04.03.2020 | Wednesday | II - LANGUAGE | 9.30 a.m to 12.30 p.m. |
| 05.03.2020 | Thursday | III - LANGUAGE | 9.30 a.m to 12.30 p.m. |
| 06.03.2020 | Friday | MATHEMATICS | 9.30 a.m to 12.45 p.m. |
| 07.03.2020 | Saturday | SOCIAL SCIENCE | 9.30 a.m to 12.45 p.m. |

NOTE :

1. Please stick on to the Time-Table and no deviation is allowed.
2. If Government declares unexpected holiday or if SSLC Examination Board makes any Changes, that day exam will be postponed to last day.


: ಅಧ್ಯಕ್ಷರು :
ಶ್ರೀ ಡಿ.ಕೆ. ದಿವಾಕರ
ಮುಖ್ಯೋಪಾಧ್ಯಾಯರು
ಮಾರುತಿ ಪ್ರೌಢಶಾಲೆ, ಶಿರಾಳಕೊಪ್ಪ
ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
M : 9880562115

: ಕಾರ್ಯದರ್ಶಿ :
ಶ್ರೀ ಎಂ.ಎಸ್. ಚಂದ್ರೇಗೌಡ
ಮುಖ್ಯೋಪಾಧ್ಯಾಯರು
ಪಿ.ಇ.ಎಸ್. ಪ್ರೌಢಶಾಲೆ,
ತುರುವೇಕೆರೆ, ತುಮಕೂರು ಜಿಲ್ಲೆ.
M : 9449644061

: ಖಜಾಂಚಿ :
ಶ್ರೀ ಎಸ್.ಆರ್. ಕಟ್ಟಿಮನಿ
ಮುಖ್ಯೋಪಾಧ್ಯಾಯರು
ಸರ್ಕಾರಿ ಪ್ರೌಢ ಶಾಲೆ,
ಕಪನೂರು, ಕಲ್ಬುರ್ಗಿ ಜಿಲ್ಲೆ.
M : 9945582877


Scanned by CamScanner